ಎಂಥವರ ಎದೆಯೂ ನಡುಗಬೇಕು. ಆ ಊರಿನಲ್ಲಿ ಬಸ್ಸು ನಿಲ್ದಾಣವೆಂದು ಪ್ರತ್ಯೇಕ ಸ್ಥಳವೇನೂ ಇರಲಿಲ್ಲ. ಪ್ರತಿಸಲ ಹೋಗುವಾಗ ಅವನ ತಂದೆ ಅವನೊಂದಿಗೆ ಬರುವ ಕಟ್ಟಳೆ ಇತ್ತು. ಅವರೇನೂ ಜೊತೆಯಲ್ಲಿ ಹೆಜ್ಜೆ ಹಾಕುತ್ತಿದ್ದರಂತೇನಿಲ್ಲ. ಉಟ್ಟ ವೇಸ್ಟಿಯನ್ನು ಮೇಲಕ್ಕೆ ಕಟ್ಟಿ, ಕೈಯ್ಯಲ್ಲಿ ತಿಂಡಿತೀರ್ಥಗಳ ಚಿಕ್ಕ ಚೀಲವನ್ನಾದರೂ ಹಿಡಿದು, ಬೀಸ ಬೀಸ ನಡೆದುಕೊಂಡು ಅವನ ಮುಂದಿನಿಂದಲೋ, ಹಿಂದಿನಿಂದಲೋ ಬಸ್ಸು ನಿಲ್ಲುವಲ್ಲಿಗೆ ಧಾವಿಸಿ ಹೋಗಿ, ಕೈ ಮಾಡಿಯೋ, ಹೆಗಲ ಮೇಲಿನ ಬೈರಾಸವನ್ನು ಬೀಸಿಯೋ ಬಸ್ಸು ನಿಲ್ಲಿಸುತ್ತಿದ್ದರು. ಅವನು ಕುಳಿತ ಮೇಲೆ ಕಿಟಕಿಯಿಂದಲೇ ತಿಂಡಿಯ ಚೀಲವನ್ನು ಒಳಗೆ ರವಾನಿಸುತ್ತಿದ್ದರು.

ಅವನ ಅಮ್ಮನಿಗೂ ಕಾಲೇಜಿನಲ್ಲಿನ ಅವನ ನಡತೆಗಳು ಇಷ್ಟವಾಗುತ್ತಿರಲಿಲ್ಲ. ಕೋರ್ಟಿನ ರಜೆಗೆ ಬೆಂಗಳೂರಿನಿಂದ ಊರಿಗೆ ಬರುತ್ತಿದ್ದ ಅವಳ ಅಣ್ಣ ಪಾರ್ಥನ ಕಾಲೇಜು ಚಟುವಟಿಕೆಗಳ ಬಗ್ಗೆ ಅವಳಿಗೆ ಹೇಳಿ ಅಸಮಾಧಾನಪಟ್ಟುಕೊಳ್ಳುತ್ತಿದ್ದರು. ಹೀಗೇ ಆದರೆ ಮುಂದಿನ ಬದುಕು ಹೇಗೆ? ಉಳಿದ ಮೂರು ಮಕ್ಕಳನ್ನು ಹೇಗೆ ಬೆಳೆಸಿ ದಾರಿಗೆ ತಂದೇನು? ಎಂದು ಅವಳು ಚಿಂತಿಸುತ್ತಿದ್ದಳು. ಬೆಂಗಳೂರಿನ ಹೈಕೋರ್ಟಿನಲ್ಲಿ ವಕೀಲನಾಗಿದ್ದ ತನ್ನ ಅಣ್ಣ ಅವನನ್ನು ಮನೆಯಲ್ಲಿ ಇಟ್ಟುಕೊಂಡು ಕಲಿಸಲು ಒಪ್ಪಿದ್ದೇ ದೊಡ್ಡ ಸಂಗತಿ. ಅಂಥದ್ದರಲ್ಲಿ ತನ್ನ ಮಗನ ಈ ಬೇಜವಾಬ್ದಾರಿತನ ಅವಳಿಗೆ ಅರ್ಥವಾಗುತ್ತಿರಲಿಲ್ಲ. ಮನೆಯಲ್ಲಿ ಅವಳ ಭಾವಮೈದುನಂದಿರು ಅವನ ಕಾಲೇಜಿನ ತಕರಾರಿನ ಬಗ್ಗೆ ಆಡಿಕೊಂಡಾಗಲೆಲ್ಲ ಅವಳು ಒಂದು ಹಿಡಿಯಾಗಿ ಬಿಡುತ್ತಿದ್ದಳು.



ವಾರಾಂತ್ಯದಲ್ಲೋ, ರಜೆಯಲ್ಲೋ ಅವನು ಮನೆಗೆ ಬಂದಾಗ ಯಾರೂ ಇಲ್ಲದ ಹೊತ್ತಿನಲ್ಲಿ ಮೂಲೆಗೆ ಎಳಕೊಂಡು ಹೋಗಿ, ‘ಇಲ್ಲ್ ಕಾಣ್ ಮಾಣಿ, ಸರೀಕರೆದ್ರು ತಲಿ ಎತ್ತದಿದ್ದ್ ಹಾಂಗ್ ಮಾಡ್ತಿಯ ಮಗ?’ ಎಂದು ನೊಂದು ಕೇಳಿದರೆ, ‘ಅಮ್ಮ, ಅದ್ನೆಲ್ಲ ನಂಬ್ಕಂಡ್ ಕೂಕಣ್ ಬೇಡ. ಮರ್ಯಾದೆ ಕಳೀವ್ ಹಾಂಗಿದ್ ನಾ ಎಂಥದ್ದೂ ಮಾಡ್ಲಿಲ್ಲೆ. ಅನ್ಯಾಯದ ವಿರುದ್ಧ ದನಿ ಎತ್ತುದ್ ತಪ್ಪಾ ಹಾಂಗಾರೆ?.....’ ಎಂದು ಏನೇನೋ ಹೇಳತೊಡಗುತ್ತಿದ್ದ.

‘ಏನೋಪ್ಪ, ತಣ್ಣೀರ್‌ನಾದ್ರೂ ತಣ್ಸೆ ಕುಡೀಕಂಬ್ರು...’ ಎನ್ನುವಷ್ಟರಲ್ಲಿ ಅವನ ಸಿಟ್ಟು ಏರುತ್ತಿತ್ತು, ಜೊತೆಯಲ್ಲಿ ಸ್ವರವೂ. ‘ಹೀಂಗ್ ಮಿಣ್ಣಗ್ ಕೂತ್ಕಂಡೇ ನಮ್ಮ್ ಜಾತಿಯವ್ರು ಹೀಂಗಾದ್ದು. ಈ ಜಾತಿಯಲ್ಲ್ ಯಾಕಾರೂ ಹುಟ್ಟಿದ್ನೋ.....’ ಆಗೆಲ್ಲ ಅವಳು ಅವನ ಬಾಯಿಯ ಮೇಲೆ ರಪ್ಪೆಂದು ಅಂಗೈ ಇಟ್ಟು ಮಾತಿಗೆ ಕಡಿವಾಣ ಹಾಕುತ್ತಿದ್ದಳು.

ಆಸ್ತಿ ಪಾಲಾಗಿ ಒಂದಿದ್ದ ಮನೆ ಹತ್ತಾದ ಮೇಲೆ, ಸುತ್ತು ಮುತ್ತ ಇದ್ದ ದಾಯಾದಿಗಳಲ್ಲಿ ಸಣ್ಣಪುಟ್ಟ ಮನಸ್ತಾಪಗಳು, ಕಟಿಪಿಟಿಗಳು ಸಾಮಾನ್ಯವಾಗಿದ್ದುವು. ಅವನ ಅಮ್ಮನಾದರೊ ಕುಟುಂಬದವರ ಯಾವ ಕೆಲಸವಿದ್ದರೂ ಮಾಡಿಕೊಡುತ್ತ, ಅವರ ಬೈಗುಳಗಳನ್ನೂ ಕೇಳುತ್ತ ಇದ್ದುಬಿಡುತ್ತಿದ್ದಳು. ತಗ್ಗಿ ಬಗ್ಗಿ ನಡೆಯುವುದು ಅವಳ ಸ್ವಭಾವವೇ ಆಗಿಬಿಟ್ಟಿತ್ತು. ಪಾರ್ಥನ ಅಪ್ಪನದು ತಟಸ್ಥ ನೀತಿ. ಆಚೀಚಿನವರ ಸಣ್ಣ ಬುದ್ಧಿ ಅವರಿಗೆ ಹಿಡಿಸುತ್ತಿರಲಿಲ್ಲ. ಆದರೆ ಆ ಬಗ್ಗೆ ಚಕಾರ ಎತ್ತುತ್ತಲೂ ಇರಲಿಲ್ಲ.

ಪಾರ್ಥನಿಗೆ ಒಮ್ಮೊಮ್ಮೆ ಇದನ್ನು ಸಹಿಸುವುದಾಗುತ್ತಿರಲಿಲ್ಲ. ತಮ್ಮದಲ್ಲದ ತಪ್ಪುಗಳಿಗೆ ಬೈಗಳು, ಅಪಮಾನಗಳಾಗುವಾಗ, ಚಿಕ್ಕಪ್ಪ, ದೊಡ್ಡಪ್ಪಂದಿರ ಮಕ್ಕಳೆದುರು ಎರಡನೇ ದರ್ಜೆಯ ಪ್ರಜೆಗಳಂತೆ ಬಾಳುವ ಮಾಡುವ ಪ್ರಸಂಗಗಳಲ್ಲಿ ಅವನೊಳಗಿನ ನೋವು ವಿಚಿತ್ರರೂಪಗಳನ್ನು